# ಕರ್ನಾಟಕ ಸರ್ಕಾರ
## ಕಂದಾಯ ಇಲಾಖೆ

### ಭೂಸ್ವಾಧೀನ ಕಾಯ್ದೆಯ ಕಲಂ-19(1) ರೊಂದಿಗೆ ಓದಲಾದ ಪ್ರಕರಣ 19(2) ರ ಅನ್ವಯ ಘೋಷಣೆ

ಸಂಖ್ಯೆ: ಆರ್ ಡಿ 12 ಎಕ್ಯೂಗು 2021

ದಿನಾಂಕ: 16.12.2021

ಇದರ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ, ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಗಾಂಧಿನಗರ ಗ್ರಾಮದ ಜಮೀನನ್ನು ವಾಡಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಾಲೇಜು ನಿರ್ಮಾಣಕ್ಕಾಗಿ ಭೂಸ್ವಾಧೀನತೆ ಅಗತ್ಯವಾಗಿದೆ ಎಂದು ಕಲಬುರಗಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ, 2013ರ ಕಲಂ-11(1)ರಡಿ ಕ್ರಮಾಂಕ: ಕ್ರ.ಸಂ:ಕಂ:ಭೂಸ್ವಾ:ಜಿಅಕ/53/2018-19, ದಿನಾಂಕ:18.11.2020 ರಲ್ಲಿ ಅಧಿಸೂಚಿಸಿದ್ದುದರಿಂದ,

'ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ನಿರ್ಮಾಣ ಕಾಯ್ದೆ-2013'ರ ಕಲಂ-15 ರನ್ವಯ ಸ್ವೀಕೃತ ಆಕ್ಷೇಪಣೆಗಳ ಬಗ್ಗೆ ಪರ್ಯಾಲೋಚಿಸಿ ಕಲಂ-15(2)(3)ರಡಿ ಸದರಿ ಪ್ರಕರಣದಲ್ಲಿ ಮುಂದುವರಿಯಲು ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ 12 ಎಕ್ಯೂಗು 2021 ದಿನಾಂಕ:26.04.2021 ರಡಿ ಸರ್ಕಾರದ ನಿರ್ದೇಶನ ನೀಡಲಾಗಿದೆ. ಕಾರಣ ಸದರಿ ಅಧಿನಿಯಮದ ಕಲಂ-19(1)ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವದರಿಂದ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿವೆಯೆಂದು ಸದರಿ ಅಧಿನಿಯಮ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು, ಸೇಡಂ ಉಪವಿಭಾಗ, ಸೇಡಂ ಇವರನ್ನು ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಕೈಗೊಳ್ಳುವ ಎಲ್ಲಾ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ನಿರ್ಮಾಣ ಕಾಯ್ದೆ, 2013ರ 3ನೇ ಪ್ರಕರಣದ (ಜಿ)ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಭೂಸ್ವಾಧೀನ ಕಾಯ್ದೆಯ ಕಲಂ-20ರ ಮೇರೆಗೆ ನಿರ್ದೇಶನ ನೀಡಲಾಗಿದೆ.

ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರ ಪತ್ರ ಸಂ ಕಂಇ:03:ಕೆ.ಆರ್.ಆರ್/2021, ದಿನಾಂಕ:17.11.2021ರ ಮೇರೆಗೆ ಈ ಯೋಜನೆಯ ಬಗ್ಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕರಡು ಯಾದಿಯನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ-2013ರ ಕಲಂ-17(2)ರಡಿ ಅನುಮೋದಿಸಿದ್ದು, ಕಲಂ-18ರನ್ವಯ ಪುನರ್ವಸತಿ ಮತ್ತು ಪುನರ್ನಿರ್ಮಾಣದ ಸಾರಾಂಶವನ್ನು ಕಲಂ-19(2)ರಡಿ ಈ ಮೂಲಕ ಘೋಷಿಸಿದೆ.

ಭೂಸ್ವಾಧೀನ ಕಾಯ್ದೆಯ ಕಲಂ-21(1)ರಡಿ ಸಂಬಂಧಿಸಿದ ಹಿತಾಸಕ್ತರಿಗೆ ಭೂಸ್ವಾಧೀನತೆಯ ಜಮೀನನ್ನು ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮ್ ಸಲ್ಲಿಸಲು ಸೂಚಿಸಿ ತಿಳುವಳಿಕೆಯ ನೋಟಿಸು ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಜಮೀನಿನ ವಿವರವನ್ನು ಸೂಚಿಸಿರುವ ಒಂದು ನಕಾಶೆಯನ್ನು ಆಸಕ್ತ ಜನರ ಅವಗಾಹನೆಗಾಗಿ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು, ಸೇಡಂ ಉಪವಿಭಾಗ, ಸೇಡಂ ಇವರ ಕಛೇರಿಯಲ್ಲಿ ಇರಿಸಲಾಗಿದೆ.

**:: ಅನುಸೂಚಿ ::**

**ಜಿಲ್ಲೆ: ಕಲಬುರಗಿ** **ತಾಲ್ಲೂಕು: ಚಿತ್ತಾಪೂರ** **ಹೋಬಳಿ: ಚಿತ್ತಾಪೂರ** **ಗ್ರಾಮ: ಗಾಂಧಿನಗರ**

| ಕ್ರ. ಸಂ. | ಭೂಮಾಲೀಕರ ಹೆಸರು | ಸರ್ವೆ ನಂಬರ್ | | ತರಹೆ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | ವಿಸ್ತೀರ್ಣ | ಆಕಾರ ರೂ.ಪೈ |
|---|---|---|---|---|---|---|---|---|---|---|
| | | 11(1)ರ ಪ್ರಕಾರ | ಜೆ.ಎಮ್.ಸಿ ಪ್ರಕಾರ | | | | | | | |
| 01 | ಶ್ರೀಮತಿ ಕಮಲಾಬಾಯಿ ಗಂಡ ಶರಣಪ್ಪ ಗೋಣಿ | 56 | 56 | ಖುಷ್ಕಿ | 55 | 59 | 51 | 60 | 1-09 | 6.49 |
| 02 | ಶ್ರೀಮತಿ ಕಮಲಾಬಾಯಿ ಗಂಡ ಶರಣಪ್ಪ ಗೋಣಿ | 57 | 57/2 | ಖುಷ್ಕಿ | 55 | 59 | 51 | 60 | 1-16 | 11.81 |
| 03 | ಶ್ರೀ ಅಮರೇಶ ತಂದೆ ಸಿದ್ರಾಮಪ್ಪ ಗೋಣಿ | 57/1 | 57/1 | ಖುಷ್ಕಿ | 55 | 59 | 51 | 60 | 1-15 | 11.58 |
| 04 | ಶ್ರೀ ಅಮರೇಶ ತಂದೆ ಸಿದ್ರಾಮಪ್ಪ ಗೋಣಿ | 58 | 58 | ಖುಷ್ಕಿ | 57 | 58 | 58 | 59 | 0-06 | 12.70 |
| | | | | | | | | ಒಟ್ಟು | **4-06** | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀನಿವಾಸ.ಎ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ -1&3).

PR-671